**OS: 115-15** **PW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 01.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A, ವಕೀಲರಿಂದ ಃ**

2. ದಾವಾ ಆಸ್ತಿ 2 ಎಕರೆ ಇದೆ. ದಾವಾ ಆಸ್ತಿ ಮೂಲ ನಮ್ಮ ಅಜ್ಜನ ಹಿಸ್ಸೆಗೆಯಲ್ಲಿದ್ದು, ನಂತರ ನಮ್ಮ ತಂದೆ ಮತ್ತು ದೊಡ್ಡಪ್ಪನಿಗೆ ಬಂದಿದೆ. 2 ನೇ ಪ್ರತಿವಾದಿ ನನ್ನ ತಂದೆ, ಒಂದನೇ ಪ್ರತಿವಾದಿ ನಮ್ಮ ದೊಡ್ಡಪ್ಪ. ಪ್ರತಿವಾದಿ-1 ಮತ್ತು 2 ಇವರು ಬೇರೆ ಬೇರೆಯಾಗಿದ್ದಾರೆ. ನನ್ನ ಮದುವೆಯಾಗಿ ಒಂದು ವರ್ಷವಾಯಿತು. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆ ಶಿಕ್ಷಣ ಮತ್ತು ಮದುವೆ ಮಾಡಿರುತ್ತಾರೆ. ನನ್ನ ವಯಸ್ಸು 32 ಇರುತ್ತದೆ. 2001 ರಿಂದ ನಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಬೇರೆ ಬೇರೆ ಇದ್ದಾರೆ. ನಮ್ಮ ತಂದೆ ಮನೆತನದ ಹಿರಿತನ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಬರಿ ಕುಡಿಯುವುದು, ಯಾರಿಗಾದರೂ ಹೊಲವನ್ನು ಬರೆದುಕೊಡುವನು. ನಾವು ಒಟ್ಟು 4 ಜನ ಮಕ್ಕಳು ಇದ್ದೇವೆ. ನಾವು ಒಟ್ಟು 12 ಜನ ಸೇರಿ ಕೇಸ್ ಹಾಕಿರುತ್ತೇವೆ. ನಾನು 6 ನೇ ವಾದಿ ಇರುತ್ತೇನೆ. ನಮ್ಮ ತಂದೆಯ ಮೇಲೆ ಕೇಸ್ ಹಾಕಿರುತ್ತೇವೆ. ಭರತ್‌ಕುಮಾರನ ಮೇಲೆ ಕೇಸ್ ಹಾಕಿರುತ್ತೇವೆ, ಉಳಿದವರ ಬಗ್ಗೆ ಹೆಸರು ಗೊತ್ತಿಲ್ಲ. ನಮ್ಮ ತಂದೆ ಆಸ್ತಿ ನಮಗೆ ಬೇಕೆಂದು ಕೇಳಿರುತ್ತೇವೆ, ಇಷ್ಟು ಬಿಟ್ಟು ಬೇರೇನೂ ನನಗೆ ಗೊತ್ತಿಲ್ಲ. ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿರುತ್ತೇನೆ. ನಮ್ಮ ತಂದೆ ಹೇಳಿದ ಕಾಗದ ಪತ್ರಗಳ ಆಧಾರದ ಮೇಲೆ ಮುಖ್ಯ ವಿಚಾರಣೆ ಬರೆಸಿರುತ್ತೇನೆ.

3. ಪ್ರತಿವಾದಿ-4 ರಿಂದ 6, ಪ್ರತಿವಾದ ಪತ್ರದಲ್ಲಿ ಏನೂ ಹೇಳಿರುತ್ತಾರೆ ಮತ್ತು ಯಾವ ಕಾಗದ ಪತ್ರಗಳನ್ನು ಹಾಜರಪಡಿಸಿರುತ್ತಾರೆಂದು ಖುದ್ದಾಗಿ ನನಗೆ ಗೊತ್ತಿಲ್ಲ. ಮತ್ತು ನಮ್ಮ ವಕೀಲರಿಗೆ ಅದರ ಬಗ್ಗೆ ಮಾಹಿತಿ ಕೇಳಿಲ್ಲ. ನಾನು ಖರೀದಿ ಪತ್ರವನ್ನು ನೋಡಿಲ್ಲ. ನಮ್ಮ ತಂದೆ ಖರೀದಿ ಪತ್ರ ಬರೆದುಕೊಟ್ಟಿಲ್ಲವೆಂದು ಹೇಳಿರುತ್ತಾನೆ. 10 ವರ್ಷಗಳ ಹಿಂದೆ ನಾನು ಕೇಳಿದಾಗ ನಮ್ಮ ತಂದೆ ಯಾವುದೇ ಕಾಗದ ಪತ್ರ ಬರೆದುಕೊಟ್ಟಿಲ್ಲವೆಂದು ಹೇಳಿರುತ್ತಾನೆ. ನಮ್ಮ ತಂದೆ ಮತ್ತು ಚಿಕ್ಕಪ್ಪ ವಕೀಲರ ಮುಖಾಂತರ ಈ ದಾವೆಯಲ್ಲಿ ಹಾಜರಾಗಿರುತ್ತಾರೆ.

**OS: 115-15** **PW-2**

ನಮ್ಮ ತಂದೆ ಮತ್ತು ಚಿಕ್ಕಪ್ಪ ಕೃಷ್ಣ ಹೇಗಡೆ ವಕೀಲರ ಮೂಲಕ ಹಾಜರಾಗಿರುತ್ತಾರೆ. ಈ ದಾವೆಯಲ್ಲಿ ನಮ್ಮ ತಂದೆ ನಮ್ಮ ವಿರುದ್ಧ ಇರುತ್ತಾನೆ. ನಮ್ಮ ತಂದೆ ಮತ್ತು ಚಿಕ್ಕಪ್ಪ ನಮ್ಮ ವಕೀಲರು ಕೃಷ್ಟ ಹೆಗಡೆ ಇರುತ್ತಾರೆ, ನಮ್ಮೆಲ್ಲರ ವಕೀಲರು ಕೃಷ್ಣ ಹೆಗಡೆ ಇರುತ್ತಾರೆ. ಈ ಕೇಸಿನಲ್ಲಿ ಬೇರೆ ವಾದಿ ಯಾರು ಸಾಕ್ಷಿ ಕೊಟ್ಟಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಮ್ಮ ಅಕ್ಕ ಸಾಕ್ಷಿ ಕೊಟ್ಟಿದ್ದು ಕೇಳಿರುತ್ತೇನೆ. 4 ನೇ ವಾದಿ ಇರುತ್ತಾರೆ. ನಮ್ಮ ಅಕ್ಕ ಏನು ಸಾಕ್ಷಿ ನುಡಿದಿರುತ್ತಾಳೆಂದು ನಾನು ತಿಳಿದುಕೊಂಡಿಲ್ಲ. ನಮ್ಮ ವಕೀಲರು ನಿನಗೆ ಏನು ಗೊತ್ತಿದೆ ಹೇಳು ಎಂದು ಹೇಳಿರುತ್ತಾರೆ. ನಮ್ಮ ಅಕ್ಕ ಏನೂ ದಾಖಲೆ ಹಾಜರಪಡಿಸಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ನಮ್ಮ ಅಕ್ಕ ಏನು ಸಾಕ್ಷಿ ನುಡಿದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯ ಇಂಗ್ಲೀಷ ಭಾಷೆಯಲ್ಲಿ ಬರೆದಿದ್ದನ್ನು ಓದಿ ನಮ್ಮ ವಕೀಲರು ನಮಗೆ ಹೇಳಿರುತ್ತಾರೆ. ನಮ್ಮ ಮನೆತನದಲ್ಲಿ ನಾವು ಎಷ್ಟು ಕೇಸ್ ಹಾಕಿರುತ್ತೇವೆ ಮತ್ತು ನಮ್ಮ ಎಷ್ಟು ಕೇಸ್ ಇವೆ ಎಂದು ನಮ್ಮ ವಕೀಲರಿಗೆ ಹೇಳಿಲ್ಲ. ಪಾಟೀ ಸವಾಲಿಗೆ ಬರುವಾಗ ನಮ್ಮ ವಕೀಲರಿಗೆ ಏನನ್ನು ಬರೆಯಲಾಗಿದೆ ಎಂದು ಕೇಳಿಲ್ಲ. ಗಿರೀಶಗೌಡ ನನ್ನ ತಮ್ಮ. ನನ್ನ ತಮ್ಮನ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ.

4. ಪ್ರತಿವಾದಿ-4 ರಿಂದ 6, ಪ್ರತಿವಾದಿ 1 ಮತ್ತು 2 ರವರ ಕಡೆಯಿಂದ ಮಾಡಿಕೊಂಡ ಖರೀದಿ ಪತ್ರವನ್ನು ಹಾಜರಪಡಿಸಿದ್ದು, ಅವುಗಳನ್ನು ನೋಡಿದ್ದಿಯಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ಹೇಳುತ್ತಾರೆ. ನ್ಯಾಯಾಲಯದಲ್ಲಿ ಹಾಜರಪಡಿಸಿದ್ದು ಏಕೆ ನೋಡಿಲ್ಲವೆಂದರೆ, ಖರೀದಿ ಆಗಿಲ್ಲ, ಆ ಕಾರಣ ನೋಡಿಲ್ಲ. ನಮ್ಮ ತಂದೆ ಖರೀದಿ ಕಾಗದ ಪತ್ರ ಬರೆದುಕೊಟ್ಟಿಲ್ಲವೆಂದು ವಕೀಲರಿಗೆ ಮಾಹಿತಿ ನೀಡಿಲ್ಲ. ನಮ್ಮ ತಂದೆ ಮತ್ತು ಚಿಕ್ಕಪ್ಪ ಪ್ರತಿವಾದಿ-1 ಮತ್ತು 2 ನಾವು ಖರೀದಿ ಮಾಡಿಕೊಟ್ಟಿಲ್ಲವೆಂದು, ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡಿಲ್ಲ. ನಾನು ದಾವೆಯಲ್ಲಿ ಎಲ್ಲಿಯೂ ಖರೀದಿ ಪತ್ರದ ಬಗ್ಗೆ ನಮೂದು ಮಾಡಿಲ್ಲ. ನನ್ನ ಪ್ರಕಾರ ಇನ್ನು ಬೇರೆ ವಾದಿಯರು ಸಾಕ್ಷಿ ಕೊಡುತ್ತಾರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ರೇಶನ್ ಕಾರ್ಡ ಮತ್ತು ಆಧಾರ ಕಾರ್ಡ ಬಿಟ್ಟರೆ ವಕೀಲರಿಗೆ ಬೇರೆ ದಾಖಲೆ ಕೊಟ್ಟಿಲ್ಲ. ರೇಶನ್ ಕಾರ್ಡ ಮತ್ತು ಆಧಾರ ಕಾರ್ಡ ಹಾಜರಪಡಿಸಿದ ಬಗ್ಗೆ ನಾನು ನಮ್ಮ ವಕೀಲರಿಗೆ ಕೇಳಿರುತ್ತೇನೆ, ನಮ್ಮ ವಕೀಲರು ಹಾಜರಪಡಿಸಿದ್ದೇನೆಂದು ಹೇಳಿರುತ್ತಾರೆ.

ಮನೆ ಫೋಟೋ ಹಾಜರಪಡಿಸಿರುತ್ತೇನೆ. ಮನೆಗಳು ಯಾವ ಸರ್ವೆ ನಂಬರುಗಳಲ್ಲಿ ಬರುತ್ತವೆ ಎಂದು ನಿರ್ದಿಷ್ಟ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ಸರಿ. ಸರ್ವೆ ನಂಃ 95/6 ರಲ್ಲಿ ಬರುತ್ತದೆ. ಪ್ರತಿವಾದಿ-4 ರಿಂದ 6 ರವರ ಆಸ್ತಿಯಲ್ಲಿಮನೆ ಕಟ್ಟಿಸಿಲ್ಲ ಮತ್ತು ಮನೆ ಯಾವ ಜಾಗದಲ್ಲಿ ಬರುತ್ತವೆ ಎಂದು ತೋರಿಸಲು ನಿರ್ಧಿಷ್ಟ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ಮತ್ತು 2 ಹಣಕಾಸಿನ ಅಡಚಣೆ ಸಲುವಾಗಿ ಮಕ್ಕಳ ಶಿಕ್ಷಣಕ್ಕಾಗಿ ಮತ್ತು ವಂಶೋದ್ಧಾರಕ್ಕಾಗಿ ದಾವಾ ಆಸ್ತಿಯನ್ನು ಪ್ರತಿವಾದಿ 4 ರಿಂದ 6 ರವರಿಗೆ ಮಾರಾಟ ಮಾಡಿದ್ದಾರೆ ಅಂದರೆ, ಹೊಲವನ್ನು ಮಾರಾಟ ಮಾಡಿಯೇ ಇಲ್ಲವೆಂದು ಹೇಳುತ್ತಾನೆ. ನಮ್ಮ ತಂದೆ ಕುಡಿಯುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ಆಸ್ತಿಗಳ ಬೆಲೆ ಹೆಚ್ಚಾಗಿದ್ದರಿಂದ ಪ್ರತಿವಾದಿ 4 ರಿಂದ 6 ರವರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ಇವರು ನನ್ನನ್ನು ಹೊರತುಪಡಿಸಿ ಉಳಿದ ವಾದಿಯರ ಜೊತೆ ಚರ್ಚೆ ಮಾಡಿ, ಯಾವ ರೀತಿ ಕಾಗದ ಮಾಡಬೇಕು ಮತ್ತು ಹಣ ಹೇಗೆ ತೆಗೆದುಕೊಳ್ಳಬೇಕೆಂದು ಚರ್ಚೆ ಮಾಡಿದ್ದರು ಅಂದರೆ ಸರಿಯಲ್ಲ. ಪ್ರತಿವಾದಿ 4 ರಿಂದ 6 ರವರು ಒಟ್ಟು 48 ಚೆಕ್ಕಗಳು ಮೂಲಕ ಎಲ್ಲಾ ವಾದಿಯಗಳಿಗೆ ಮತ್ತು ಸಂಬಂಧಪಟ್ಟವರಿಗೆ ಚೆಕ್ಕ ಮುಖಾಂತರ ಹಣ ಸಂದಾಯ ಮಾಡಿರುತ್ತಾರೆ ಅಂದರೆ, ಸಾಕ್ಷಿಯು ಹೊಲವನ್ನು ಮಾರಾಟ ಮಾಡಿಯೇ ಇಲ್ಲವೆಂದು ಹೇಳುತ್ತಾರೆ. ಎಲ್ಲರಿಗೂ ಚೆಕ್ಕಗಳ ಮುಖಾಂತರ ಹಣ ಸಂದಾಯವಾಗಿದ್ದರೂ, ಹೊಲ ಮಾರಾಟ ಮಾಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ, ಹೊಲವನ್ನು ಮಾರಾಟ ಮಾಡಿಲ್ಲವೆಂದು ಹೇಳುತ್ತಾರೆ. ಎಲ್ಲರೂ ಖಾತೆ ಮೂಲಕ ಹಣವನ್ನು ತೆಗೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೆಚ್ಚಿನ ಹಣಗೋಸ್ಕರ ಸುಳ್ಳು ಹೇಳುತ್ತಿದ್ದೇನೆ ಅಂದರೆ, ಖರೀದಿನೇ ಆಗಿಲ್ಲವೆಂದು ಹೇಳುತ್ತಾರೆ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.